SC.110/2022
PW.10

# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –110/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸಿದ್ದರಾಜು | ಫ್ರಾಸಾ: | 10 |
| ತಂದೆ ಹೆಸರು | : | ಪುಟ್ಟಯ್ಯ | ಚಾಸಾ: | 16 |
| ವಯಸ್ಸು | : | 50 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:10.03.2025 | |
| ವೃತ್ತಿ | : | ಗಾರೆ ಕೆಲಸ | | |
| ವಾಸ ಸ್ಥಳ | : | ಮುದ್ದಹಳ್ಳಿ | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ಚಾಸಾ–17 ಗೊತ್ತಿಲ್ಲ. ಆರೋಪಿ ಗೊತ್ತು. ಆತನ ತಂದೆಯ ಹೆಸರು ಮಹದೇವಯ್ಯ. ನಮ್ಮ ಮನೆಯಿಂದ ಆರೋಪಿಯ ಮನೆ ಉತ್ತರ ದಿಕ್ಕಿಗೆ ಬರುತ್ತದೆ. ಆರೋಪಿಯ ಹೆಂಡತಿ ಗೊತ್ತಿಲ್ಲ. ಅವನಿಗೆ ಎಷ್ಟು ಮಕ್ಕಳು ಎನ್ನುವುದು ಸಹ ಗೊತ್ತಿಲ್ಲ. ಆರೋಪಿಯು ತನ್ನ ಹೆಂಡತಿಯನ್ನು ಯಾವ ವಿಚಾರಕ್ಕೆ ಅನುಮಾನಿಸುತ್ತಿದ್ದನು ಎನ್ನುವುದು ಗೊತ್ತಿಲ್ಲ. ಆರೋಪಿಯ ಹೆಂಡತಿ ಯಾವ ರೀತಿ ಸತ್ತಿರುತ್ತಾಳೆ ಎನ್ನುವುದು ಗೊತ್ತಿಲ್ಲ. ಈ ಕೇಸಿನ ವಿಚಾರ ಮತ್ತೇನು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಬಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ**

2. "ಈಗ್ಗೆ 6 ವರ್ಷದಲ್ಲಿ --------- ಮಲ್ಲೇಶನನ್ನು ನೀರಿಗೆ ಎಸೆದಿರುತ್ತಾನೆ " ಎಂಬುದಾಗಿ ನಾನು ದಿಃ 15.12.2021 ರಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.11 ಎಂದು

ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಯು ನಮ್ಮ ಊರಿನವನಾದ್ದರಿಂದ ಆತನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ** ಆರೋಪಿ ಪರ ವಕೀಲರಿಂದ ಃ

ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ ಃ ಇಲ್ಲ

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು